# 'ಡಿಂಡಿಮ ಕವಿ'ಯ ಪ್ರತಿಭಾ ವಿಲಾಸ!





**ಕನ್ನಡದ ಹಿರಿಯ ನಟ ಶನಿ ಮಹಾದೇವಪ್ಪ ಜ. 3ರಂದು ನಿಧನರಾಗಿದ್ದಾರೆ. 89 ವರ್ಷಗಳ ತುಂಬು ಜೀವನದಲ್ಲಿ ಅವರು ಹಲವು ಅವಿಸ್ಮರಣೀಯ ಪಾತ್ರಗಳನ್ನು ಸಹೃದಯರ ಮನಸಲ್ಲಿ ನೆಟ್ಟು ಹೋಗಿದ್ದಾರೆ. ಅವರ ಜೊತೆ ನಟಿಸಿದ, ಅವರ ಸ್ನೇಹಬಳಗದಲ್ಲಿದ್ದು ಬಲ್ಲ ಇನ್ನೊಬ್ಬ ಹಿರಿಯ ನಟ ಜೆ.ಕೆ. ಶ್ರೀನಿವಾಸಮೂರ್ತಿ, ಮಹಾದೇವಪ್ಪನವರ ನೆನಪುಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ.**

ಶನಿ ಮಹಾದೇವಪ್ಪನವರು ನಮಗೆಲ್ಲ ಹಿರಿಯ ಕಲಾವಿದರು. ನಾವು ಸಿನಿಮಾರಂಗಕ್ಕೆ ಬರುವುದಕ್ಕೂ ಮೊದಲೇ ಅವರು ನಾಟಕಕಂಪನಿಯಲ್ಲಿದ್ದು ಸಾಕಷ್ಟು ಖ್ಯಾತಿ ಗಳಿಸಿ, ಸಿನಿಮಾರಂಗಕ್ಕೆ ಬಂದು, ರಾಜ್‌ಕುಮಾರ್ ಅವರಿಗೆ ಬಹಳ ಹತ್ತಿರವಾಗಿ, ಅವರ ಜೊತೆಗೆ ಸಾಕಷ್ಟು ಸಿನಿಮಾಗಳನ್ನು ಮಾಡಿದ್ದರು.

ಯೋಗಾನರಸಿಂಹಾಚಾರ್ ಅವರು 'ರಾಜಾ ವಿಕ್ರಮ' ಎಂಬೊಂದು ನಾಟಕ ಬರೆದಿದ್ದರು. ಅದನ್ನು ಮೈಸೂರಿನ 'ಕನ್ನಡ ಥಿಯೇಟರ್ಸ್'ನ್ನುವ ನಾಟಕ ಮಂಡಳಿ ಆಡುತ್ತಿತ್ತು. ಎನ್. ಸಿ. ಮಹದೇವಸ್ವಾಮಿ ಅವರು ಅದರ ಮಾಲೀಕರು. ಅದರಲ್ಲಿ ಶ್ರೀಕಂಠಮೂರ್ತಿ ಎನ್ನುವ ದೊಡ್ಡ ಕಲಾವಿದರು ವಿಕ್ರಮನ ಪಾತ್ರ ಮಾಡುತ್ತಿದ್ದರು. ಭಟ್ಟಿ ಅಂತ ಇನ್ನೊಂದು ಪಾತ್ರ ಇತ್ತು. ಅದನ್ನು ಮಹಾದೇವಪ್ಪ ಎನ್ನುವ ಹೆಸರಿನವರೇ ಮಾಡುತ್ತಿದ್ದರು. ನಮ್ಮ ಮಹದೇವಪ್ಪನವರ ಕಣ್ಣು ಬಹಳ ಭಯಂಕರವಾಗಿತ್ತಲ್ಲ, ಹಾಗಾಗಿ ಅವರಿಗೆ ಶನಿ ಪಾತ್ರ ಕೊಟ್ಟಿದ್ದರು.

'ರಾಜಾ ವಿಕ್ರಮ' ನಾಟಕ ಎಲ್ಲ ಊರುಗಳಲ್ಲಿಯೂ ಸಾಕಷ್ಟು ಯಶಸ್ವಿಯಾಗಿ ಪ್ರದರ್ಶನ ಕಂಡು ಬೆಂಗಳೂರಿಗೆ ಬಂತು. ಬೆಂಗಳೂರಿನಲ್ಲಿ ಸಿಟಿ ಮಾರ್ಕೆಟ್ಟಲ್ಲಿ ಅಪ್ಸರಾ ಚಿತ್ರಮಂದಿರ ಇತ್ತು ನೋಡಿ, ಅದು ಮೊದಲು 'ದೊಡ್ಡಣ್ಣ ಸಭಾಂಗಣ' ಆಗಿತ್ತು. ಅಲ್ಲಿ ಈ ನಾಟಕ ಬಹಳ ಯಶಸ್ವಿಯಾಗಿ ಪ್ರದರ್ಶನ ಕಾಣುತ್ತಿತ್ತು.

ಅದೇ ಸಮಯದಲ್ಲಿ ಪಂಡಿತ್ ಜವಾಹರಲಾಲ್ ನೆಹರೂ ಬೆಂಗಳೂರಿಗೆ ಬಂದಿದ್ದರು. ಮಹಾರಾಜ ಜಯಚಾಮರಾಜ ಒಡೆಯರ್ ಆ ನಾಟಕವನ್ನು ನೋಡಿದ್ದರು. ಅವರು ನೆಹರೂ ಅವರಿಗೆ ನಾಟಕ ನೋಡುವಂತೆ ಆಮಂತ್ರಿಸಿದರು. ನೆಹರೂ ಬೆಂಗಳೂರಿನ ದೊಡ್ಡಣ್ಣ ಸಭಾಂಗಣಕ್ಕೆ ಬಂದು ನಾಟಕ ನೋಡಿದರು. ನಾಟಕದಲ್ಲಿನ ಶನಿ ಪಾತ್ರ ಅವರಿಗೆ ತುಂಬ ಇಷ್ಟವಾಯ್ತು. 'ಯಾರು ಆ ಪಾತ್ರ ಮಾಡಿದವರು?' ಎಂದು ವಿಚಾರಿಸಿ, ನಾಟಕ ಮುಗಿದ ಮೇಲೆ ಶನಿ ಮಹಾದೇವಪ್ಪನವರನ್ನು ಭೇಟಿಯಾಗಿ ಪ್ರಶಂಸೆ ವ್ಯಕ್ತಪಡಿಸಿದ್ದರು.

ಇವರಿಗೆ ಶನಿ ಮಹಾದೇವಪ್ಪ ಎಂದು ಯಾಕೆ ಹೆಸರು ಬಂತು ಎನ್ನುವುದಕ್ಕೆ ಒಂದು ಸ್ವಾರಸ್ಯಕರ



ಪ್ರಸಂಗವಿದೆ. ಆಗ ನಾಟಕಕಂಪನಿಗಳಲ್ಲಿ ಪ್ರತಿ ವಾರ ಕಲಾವಿದರು ಮತ್ತು ತಂತ್ರಜ್ಞರಿಗೆ ಸಂಬಳ ಕೊಡುತ್ತಿದ್ದರು. ಮಹಾದೇವಸ್ವಾಮಿ ಅವರ ನಾಟಕ ಕಂಪನಿಯಲ್ಲಿ ಈ ಇಬ್ಬರು ಮಹಾದೇವಪ್ಪನವರಿದ್ದರಲ್ಲ. ಅವರು ಸಂಬಳಕ್ಕಾಗಿ ಒಮ್ಮೆ ಮಹಾದೇವಸ್ವಾಮಿ ಅವರ ಮನೆ ಎದುರು ನಿಂತುಕೊಂಡಿದ್ದರು. ಮಹಾದೇವಸ್ವಾಮಿ ಅವರು ಒಬ್ಬೊಬ್ಬರದೇ ಹೆಸರು ಕರೆದು ಸಂಬಳ ಕೊಟ್ಟು ಕಳಿಸುತ್ತಿದ್ದರು. ಹಾಗೆಯೇ 'ಮಹಾದೇವಪ್ಪಾ' ಎಂದು ಕರೆದರು. ಆಗ ಈ ಇಬ್ಬರೂ ಮುಂದೆ ಹೋದರು. ಅವರಿಗೆ ಕಸಿವಿಸಿಯಾಯ್ತು. 'ಏನ್ರಯ್ಯಾ ಒಬ್ರನ್ನ ಕರೆದ್ರೆ ಇಬ್ಬಿಬ್ರು ಬರ್ತೀರಾ?' ಎಂದು ಕೇಳಿದರು. ಇವರು, 'ನೀವು ಮಹಾದೇವಪ್ಪಾ ಅಂತ ಕರೆದ್ರಲ್ಲಾ, ಯಾರು ಅಂತ ಗೊತ್ತಾಗ್ಲಿಲ್ಲ. ಹಾಗಾಗಿ ಇಬ್ರೂ ಬಂದ್ಬಿಟ್ವಿ' ಅಂದ್ರು. ಆಗ ಮಹಾದೇವಸ್ವಾಮಿ ಅವರು, 'ಇನ್ಮೇಲೆ ನೀನು ಭಟ್ಟಿ ಮಹಾದೇವಪ್ಪ. ನೀನು ಶನಿ ಮಹಾದೇವಪ್ಪ' ಎಂದು ಅಲ್ಲಿಯೇ ಅವರು ಇಬ್ಬರಿಗೂ ಒಂದೊಂದು ಅಡ್ಡಹೆಸರು ಇಟ್ಟುಬಿಟ್ಟರು. ಅವರಿಬ್ಬರಿಗೂ ಮುಂದೆ ಅದೇ ಕಾಯಂ ಆಗಿಹೋಯ್ತು. ಭಟ್ಟಿ ಮಹಾದೇವಪ್ಪ ಅವರೂ ರಾಜ್‌ಕುಮಾರ್ ಅವರ ಜೊತೆಗೆ ಸುಮಾರು ಸಿನಿಮಾಗಳಲ್ಲಿ ಮಾಡಿದ್ದಾರೆ.

ಶನಿ ಮಹಾದೇವಪ್ಪನವರು ಆಗ ಬಹಳ ಪ್ರಖ್ಯಾತರಾಗಿದ್ದರು. ಅವರು ವೇದಿಕೆಯ ಮೇಲೆ ಬಂದರೆಂದರೆ ಜನರೆಲ್ಲ ಗಡಗಡ ನಡುಗುತ್ತಿದ್ದರು. ಅವರಿಗಿದ್ದ ಧ್ವನಿ, ಎತ್ತರ, ಕಾರ್ಡ್‌ಬೋರ್ಡ್‌ನಲ್ಲಿ ಕಾಗೆಯನ್ನೆಲ್ಲ ಮಾಡಿ, ರಥದ ರೀತಿ ಮಾಡಿ ಸೀನ್ ಎಂಟ್ರಿ ಮಾಡುತ್ತಿದ್ದ ರೀತಿ ಪ್ರೇಕ್ಷಕರನ್ನು